# ಇಂದು ಎನ್ಐಟಿಕೆ ವಾರ್ಷಿಕ ಘಟಿಕೋತ್ಸವ

**ಮಂಗಳೂರು:** ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್ಐಟಿಕೆ)ದ 22ನೇ ವಾರ್ಷಿಕ ಘಟಿಕೋತ್ಸವ ನ.23ರಂದು ಸುರತ್ಕಲ್ ಎನ್ಐಟಿಕೆ ಸಿಲ್ವರ್‌ಜ್ಯುಬಿಲಿ ಸಭಾಂಗಣದಲ್ಲಿ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎನ್ಐಟಿಕೆಯ ನಿರ್ದೇಶಕ ಪ್ರೊ.ಬಿ. ರವಿ, ಘಟಿಕೋತ್ಸವ ಸಮಾರಂಭ ಎರಡು ಭಾಗಗಳಲ್ಲಿ ನಡೆಯಲಿದ್ದು, ಸ್ನಾತಕೋತ್ತರ (ಪಿಜಿ) ಮತ್ತು ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಮತ್ತು ಪದವಿ (ಯುಜಿ) ವಿದ್ಯಾರ್ಥಿಗಳಿಗೆ ಮಧ್ಯಾಹ್ನ 3ರಿಂದ ನಡೆಯಲಿದೆ. ಸ್ನಾತಕೋತ್ತರ ಘಟಿಕೋತ್ಸವದಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಿಕಂದರಾಬಾದ್‌ನ ಕಿಮ್ಸ್ ಫೌಂಡೇಶನ್ ಮತ್ತು ರಿಸರ್ಚ್ ಸೆಂಟರ್(ಕೆಎಫ್‌ಆರ್‌ಸಿ) ಅಧ್ಯಕ್ಷ ಮತ್ತು ಡಿಆರ್‌ಡಿಒ ನೌಕಾ ವ್ಯವಸ್ಥೆ ಮತ್ತು ಸಾಮಗ್ರಿಗಳ ಮಾಜಿ ಮಹಾನಿರ್ದೇಶಕ ಡಾ.ಭುಜಂಗ ರಾವ್ ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಎನ್ಐಟಿಕೆಯ ಪ್ರೊ. ಅರುಣ್ ಇಸ್ಲೂರು, ಪ್ರೊ. ಸೈದಕ್ ದತ್ತ, ಪಿಆರ್‌ಒ ವೈಷ್ಣವಿ ಇದ್ದರು.

Kannada Prabha, Date:23/11/24, p ,02